**ಇಂದು ದಿಃ 22-02-2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ನಾನು ನನ್ನ ಮುಖ್ಯ ವಿಚಾರಣೆಯ ಬದಲಾಗಿ ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿನ ವಿಷಯಗಳೆಲ್ಲವು ಸತ್ಯವಾಗಿರುತ್ತವೆ.**

**ಮುಂದುವರೆದ ಮುಖ್ಯ ವಿಚಾರಣೆ 1 ನೇ ಎದುರುದಾರರ ಪರ ಶ್ರೀ ಜಿ.ಪಿ . ವಕೀಲರಿಂದಃ**

ಬಿ ರಜೀಷ್ಟರ್ ಎಕ್ಸ್‌ಟ್ರಾಕ್ಟ ನ್ನು ಹಾಜರುಪಡಿಸಿದ್ದು ಅದನ್ನು ನಿಶಾನೆ ಆರ್ 1 ಎಂದು ಗುರುತಿಸಲಾಯಿತು. ವಿಮಾ ಪಾಲಿಸಿಯ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಶಾನೆ ಆರ್ 2 ಎಂದು ಗುರುತಿಸಲಾಯಿತು. ಪೇಮೆಂಟ್ ಟಿಕೇಟ್ ನ್ನು ಹಾಜರುಪಡಿಸಿದ್ದು ಅದನ್ನು ನಿಶಾನೆ ಆರ್ 3 ಎಂದು ಗುರುತಿಸಲಾಯಿತು. 2 ಇನ್ ವೈಸ್ ಹಾಜರುಪಡಿಸಿದ್ದು ಅವುಗಳನ್ನು ನಿಶಾನೆ ಆರ್ 4 ಮತ್ತು 5 ಎಂದು ಗುರುತಿಸಲಾಯಿತು. ವಾಹನ ಚಾಲನಾ ಪರವಾನಿಗೆಯನ್ನು ಹಾಜರುಪಡಿಸಿದ್ದು ಅದನ್ನು ನಿಶಾನೆ ಆರ್ 6 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಅರ್ಜಿದಾರರ ಪರಃ ಶ್ರೀ ಆರ್.ಜಿ.ಬಿ ವಕೀಲರಿಂದಃ**

ಕೆ.ಎ 17 ಬಿ 7999 ವಾಹನ ನನಗೆ ಸಂಬಂಧಪಟ್ಟಿದ್ದು. ಸದರಿ ವಾಹನವನ್ನು ಚಾಲಕನಾದ ಅಬ್ದುಲ್ ರಜಾಕ್ ಚಾಲನೆ ಮಾಡುತ್ತಿದ್ದ. ಸದರಿ ಅಬ್ದುಲ್ ರಜಾಕ್ ಇವನ ತಪ್ಪಿನಿಂದ ಆಗಿರುತ್ತದೆ ಎಂದು ಪೋಲೀಸರು ಕೇಸನ್ನು ಹಾಕಿರುತ್ತಾರೆ ಎನ್ನುವುದು ನಿಜ. ಸದರಿ ಪ್ರಕರಣದಲ್ಲಿ ಅವನು ನ್ಯಾಯಾಲಯಕ್ಕೆ ಓಡಾಡುತ್ತಿದ್ದಾನೆ ಎನ್ನುವುದು ನಿಜ. ಅಪಘಾತ ಆದ ನಂತರ ಸದರಿ ಲಾರಿಯನ್ನು ನಾನೇ ಬಿಡಿಸಿಕೊಂಡಿರುತ್ತೇನೆ ಎಂದರೆ ನಿಜ. ನಮ್ಮ ಲಾರಿಯಿಂದ ಅಪಘಾತ ಆಗಿದ್ದರಿಂದ ಪರಿಹಾರವನ್ನು ಕೊಡಲು ನಾವು ಬಾಧ್ಯಸ್ಥರು ಎಂದರೆ ಸಾಕ್ಷಿ ವಿಮಾ ಕಂಪನಿಯವರು ಕೊಡಬೇಕೆಂದು ಹೇಳುತ್ತಾರೆ. ಪರಿಹಾರ ಕೊಡಬೇಕಾಗುತ್ತದೆ ಎನ್ನುವ ಕಾರಣ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 2 ನೇ ಎದುರುದಾರರ ಪರಃ ಶ್ರೀ ಪಿ.ಕೆ. ಎಸ್ ವಕೀಲರಿಂದಃ**

ನಮ್ಮ ವಾಹನ ಅಜಾಡಸ್ ಗೂಡ್ಸ್ ವಾಹನ ಎಂದರೆ ಸರಿಯಲ್ಲ. ಚಾಲಕನಿಗೆ ಡಿ.ಎಲ್ ಇರಲಿಲ್ಲ ಹಾಗಾಗಿ ಅಜಾಡಸ್ ಗೂಡ್ಸ್ ಇದ್ದರೂ ಸಹ ಇರಲಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಲಕನಾದ ಅಬ್ದುಲ್ ರಜಾಕ್ ಇವನಿಗೆ ಸದರಿ ವಾಹನವನ್ನು ನೈಪುಣ್ಯತೆ ಮತ್ತು ಡಿ.ಎಲ್ ಇರಲಿಲ್ಲ ಎಂದರೆ ಸರಿಯಲ್ಲ. ಟ್ಯಾಂಕರ್ ಲಾರಿ ಚಲಾಯಿಸಲು ಪ್ರತ್ಯೇಕವಾದ ಲೈಸೆನ್ಸ್ ನ್ನು ತೆಗೆದುಕೊಳ್ಳಬೇಕು ಎಂದರೆ ಸರಿಯಲ್ಲ. ಸದರಿ ಚಾಲಕನಿಗೆ ಸದರಿ ವಾಹನವನ್ನು ಓಡಿಸಲು ಮಾನ್ಯವಾದ ಮತ್ತು ಸೂಕ್ತವಾದ ವಾಹನ ಚಾಲನಾ ಪರವಾನಿಗೆ ಇತ್ತು ಎನ್ನುವುದನ್ನು ತೋರಿಸಲು ಆರ್.ಟಿ.ಓ ಇವರನ್ನು ಕರೆಯಿಸಿ ಸಾಕ್ಷಿ ಮಾಡಿಸಲು ತೊಂದರೆ ಇಲ್ಲ. ಅಬ್ದುಲ್ ರಜಾಕ್ ಇವನಿಗೆ ಕೆ.ಎ 17 ಬಿ 7999 ವಾಹನವನ್ನು ಚಲಾಯಿಸಲು ಅಪಘಾತವಾದ ಸಮಯದಲ್ಲಿ ಮಾನ್ಯವಾದ ಮತ್ತು ಪರಿಣಾಮಕಾರಿಯಾದ ವಾಹನ ಚಾಲನ ಪರವಾನಿಗೆ

ಇರಲಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಪರಿಹಾರವನ್ನು ಕೊಡಲು 2 ನೇಯ ಎದುರುದಾರರು ಬಾಧ್ಯಸ್ಥರಲ್ಲ ನಾನು ಬಾಧ್ಯಸ್ಥನಾಗಿರುತ್ತೇನೆ ಎಂದರೆ ಸರಿಯಲ್ಲ.

**3 ನೇ ಎದುರುದಾರರು ಮತ್ತು ಅವರ ಪರ ವಕೀಲರು ಗೈರು ಹಾಜರು ಇದ್ದ ಕಾರಣ ಏನೂ ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾ . ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೆ ಸರಿ ಇದೆ.

**ಸಹಿ/-**
**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಹರಿಹರ.**